ಸೃಜನಿ

SRUJANI: Indian Journal of Innovative Research and Development (SIJIRD)
Volume-2 Issue 2, May-June 2023, Pp. 74-77
Bi-Monthly, Peer-Reviewed, Open Access, Indexed Journal

I S S N: 2583-3510
SIRDF
JOURNALS
editor@srujani.in
www.srujani.in

# ರಾಜಕೀಯ ವ್ಯವಸ್ಥೆಯಲ್ಲಿ ಒತ್ತಡ ಗುಂಪುಗಳ ಪಾತ್ರ

**ಸುರೇಶ ಈ**

ಸಂಶೋಧನಾ ವಿದ್ಯಾರ್ಥಿ, ಅಭಿವೃದ್ಧಿ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

***Abstract:***

*ಭಾರತವು ವಿಶ್ವದಲ್ಲಿಯೇ ಶಕ್ತಿಯುತ ಮತ್ತು ಅರ್ಥಪೂರ್ಣ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಒಳಗೊಂಡ ಬಹುದೊಡ್ಡ ರಾಷ್ಟ್ರವಾಗಿದೆ. ಭಾರತದ ಒತ್ತಡ ಗುಂಪುಗಳು ಹೆಚ್ಚಿನ ಸಂಖ್ಯೆಯಲ್ಲಿ ಖಾಸಗಿ ವ್ಯಕ್ತಿಗಳಿಂದ ಮತ್ತು ಸಂಘ–ಸಂಸ್ಥೆಗಳಿಂದ ರಚಿತಗೊಂಡಿರುತ್ತವೆ. ಇವುಗಳು ತಮ್ಮ ಹಿತಾಸಕ್ತಿಗಳ ರಕ್ಷಣೆಗೆ ಕಾರ್ಯನಿರ್ವಹಿಸುವದರಿಂದ ಒತ್ತಡ ಗುಂಪುಗಳೆಂದು ಕರೆಯಲಾಗುತ್ತದೆ. ಪ್ರಸ್ತುತ ಲೇಖನದಲ್ಲಿ ಈ ಒತ್ತಡ ಗುಂಪುಗಳು ಸರ್ಕಾರ ಮತ್ತು ರಾಜಕೀಯದ ಮೇಲೆ ಹೇಗೆ ಪ್ರಭಾವ ಬೀರುತ್ತವೆ ಎಂಬುದನ್ನು ಚರ್ಚಿಸಲಾಗಿದೆ.*

***Keywords:*** *ಒತ್ತಡ ಗುಂಪುಗಳು, ಸಂಘ–ಸಂಸ್ಥೆ, ರಾಜಕೀಯ ವ್ಯವಸ್ಥೆ, ಸಮಾನತೆ.*

## ಪೀಠಿಕೆ

ಪ್ರಜಾಪ್ರಭುತ್ವ ರಾಷ್ಟ್ರಗಳಲ್ಲಿ ಸಂಘಗಳಿಗೆ ಅಥವಾ ಸಂಸ್ಥೆಗಳಿಗೆ ಅಥವಾ ಕೂಟಗಳಿಗೆ ಪ್ರಬಲವಾದ ಸಾಧನಗಳಿವೆ. ಒಂದೇ ಭಾವನೆ ಅಥವಾ ಹಿತಾಸಕ್ತಿಯುಳ್ಳ ಜನರನ್ನು ಒಂದೂಗೂಡಿಸುವಂಥ ಪ್ರಚಾರ ಮತ್ತು ಸಂಪರ್ಕಸಾಧನಗಳೂ ಸಂಚಾರ ಸೌಲಭ್ಯಗಳೂ ಉಂಟು. ಈ ಗುಂಪುಗಳು ರಾಜ್ಯಮಟ್ಟದಿಂದ ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಮಟ್ಟಗಳನ್ನೇ ಮುಟ್ಟಬಹುದು. ಒತ್ತಡ ಗುಂಪುಗಳ ಪ್ರಭಾವ, ಅವುಗಳಲ್ಲಿರುವ ವ್ಯಕ್ತಿಗಳ ಮತ್ತು ಅವು ಸಾಧಿಸಬೇಕೆಂದಿರುವ ಗುರಿಯನ್ನೇ ಅವಲಂಬಿಸಿರುತ್ತದೆ. ಅದು ಜನರನ್ನು ಒಲಿಸಿಕೊಂಡು, ಸರ್ಕಾರ ಅದರ ಒತ್ತಡಕ್ಕೆ ಮಣಿಯುವಂತೆ ಮಾಡಿ ತನ್ನ ಗುರಿಯನ್ನು ಸಾಧಿಸಿಕೊಳ್ಳುತ್ತದೆ.

ಸಂವಿಧಾನದ 19ನೇ ವಿಧಿಯು ಜನರು ಮುಕ್ತವಾಗಿ ಸಂಘ ಸಂಸ್ಥೆಗಳನ್ನು ರಚಿಸಿಕೊಳ್ಳಲು ಅವಕಾಶ ಮಾಡಿಕೊಟ್ಟಿದೆ. ಇಂತಹ ಅವಕಾಶವನ್ನು ಬಳಸಿಕೊಂಡು ವಿವಿಧ ಜಾತಿ, ಧರ್ಮ, ವೃತ್ತಿ ಮತ್ತು ವಿವಿಧ ಗುಂಪುಗಳಿಗೆ ಸೇರಿದ ಜನರು ಸಂಘ ಸಂಸ್ಥೆಗಳನ್ನು ರಚಿಸಿಕೊಂಡು ಸರ್ಕಾರದ ಮೇಲೆ ಒತ್ತಡ ತರುವ ಮೂಲಕ ತಮ್ಮ ಉದ್ದೇಶಗಳನ್ನು ಪೂರೈಸಿಕೊಳ್ಳಲು ಪ್ರಯತ್ನಿಸುತ್ತವೆ.

ಭಿನ್ನ ಹಿತ, ಭಿನ್ನ ರುಚಿ, ಭಿನ್ನ ದೃಷ್ಟಿ ಇರುವ ಜನಗಳನ್ನು ಹೊಂದಿರುವುದು ಈಗಿನ ಸಮಾಜದ ಲಕ್ಷಣ. ಅಭಿಪ್ರಾಯ ಸ್ವಾತಂತ್ರ್ಯವಿರುವ ರಾಜಕೀಯ ವ್ಯವಸ್ಥೆಗಳಿರಲಿ, ಇದಕ್ಕೆ ಮನ್ನಣೆ ನೀಡದ ಸರ್ವಾಧಿಕಾರಿ ಪ್ರಭುತ್ವಗಳಲ್ಲೂ ಒತ್ತಡದ ಗುಂಪುಗಳು ರಹಸ್ಯವಾಗಿಯಾದರೂ ಕೆಲಸ ಮಾಡುತ್ತಿರುತ್ತವೆ. ಇವು ರಾಜಕೀಯ ಮುಖಂಡರ ಮೇಲೆ, ಸರ್ಕಾರದ ಮತ್ತು ಸರ್ಕಾರಿ ಅಧಿಕಾರಿಗಳ ಮೇಲೆ, ಚುನಾಯಿತ ಪ್ರತಿನಿಧಿಗಳ ಮೇಲೆ ತಮ್ಮ ಹಿಡಿತ ಇಟ್ಟುಕೊಳ್ಳುತ್ತವೆ.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ರಾಜಕೀಯ ಪಕ್ಷಗಳಂತೆ ಒತ್ತಡ ಗುಂಪುಗಳು ಕೂಡ ಅನಿವಾರ್ಯ

***Please cite this article as:*** ಸುರೇಶ ಈ. (2023). ರಾಜಕೀಯ ವ್ಯವಸ್ಥೆಯಲ್ಲಿ ಒತ್ತಡ ಗುಂಪುಗಳ ಪಾತ್ರ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವಲಪ್‌ಮೆಂಟ್.* 2(2), 74–77.

ವಾಗಿರುವುದ್ದರಿಂದ ಒತ್ತಡ ಗುಂಪುಗಳ ಪಾತ್ರವನ್ನು ನಿರ್ಲಕ್ಷಿಸಲಾಗದು. ಸಂಕೀರ್ಣವಾದ ಸಾಮಾಜಿಕ ವ್ಯವಸ್ಥೆಯಲ್ಲಿ ವ್ಯಕ್ತಿಯೊಬ್ಬನಿಂದ ಯಾವುದೇ ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ಕಷ್ಟಸಾಧ್ಯವಾಗಿದೆ. ಈ ಕಾರಣದಿಂದ ಅನೇಕ ಸಮಾನ ಮನಸ್ಕರು ಒಂದೆಡೆ ಸೇರಿ ತಮ್ಮ ಹಿತಾಸಕ್ತಿಗನುಗುಣವಾಗಿ ಸಂಘ–ಸಂಸ್ಥೆಗಳನ್ನು ಸ್ಥಾಪಿಸಿಕೊಂಡು ಸಮಾಜ–ಸಮುದಾಯದ ಏಳ್ಗೆಗೆ ಶ್ರಮಿಸುತ್ತಿವೆ. ವ್ಯಕ್ತಿಗತವಾಗಿ ಸರ್ಕಾರದಿಂದ ಪಡೆಯಲಾಗದ ಸೌಲಭ್ಯ ಮತ್ತು ಸವಲತ್ತುಗಳು ಅಥವಾ ಪರಿಹಾರ ಪಡೆಯಲು ಹಾಗೂ ತನ್ನ ಆಸ್ತಿ ಮತ್ತು ಅಸ್ತಿತ್ವವನ್ನು ಸಂರಕ್ಷಿಸಿಕೊಳ್ಳಲು ವ್ಯಕ್ತಿಯು ಒಂದಲ್ಲ ಒಂದು ಸಮಾಜದ ಮತ್ತು ಸಂಘಟನೆಗಳ ಸದಸ್ಯತ್ವವನ್ನು ಹೊಂದುವುದು ಅನಿವಾರ್ಯವಾಗಿದೆ.

ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ವ್ಯಕ್ತಿಯ ವೈಯಕ್ತಿಕ ಧ್ವನಿಗಿಂತ ಸಮೂಹ ಅಥವಾ ಸಾಮೂಹಿಕ ಧ್ವನಿಗೆ ಹೆಚ್ಚಿನ ಮಾನ್ಯತೆಯಿರುವುದರಿಂದ ಪ್ರತಿಯೊಬ್ಬನೂ ಒಂದಲ್ಲ ಒಂದು ಸಂಘಟನೆಗಳ ಒತ್ತಡ ಗುಂಪುಗಳ ಸದಸ್ಯತ್ವವನ್ನು ಹೊಂದಿ ಆ ಮೂಲಕ ತನ್ನ ಹಿತಾಸಕ್ತಿಗಳನ್ನು ರೂಪಿಸಿಕೊಳ್ಳಲು ಪ್ರಯತ್ನಿಸುತ್ತಾನೆ.

ಒತ್ತಡ ಗುಂಪುಗಳ ಉಗಮಕ್ಕೆ ಸಂಬಂಧಿಸಿದಂತೆ ಪಾಶ್ಚಿಮಾತ್ಯ ರಾಷ್ಟ್ರಗಳ ಬಗ್ಗೆ ದೃಷ್ಟಿ ಹರಿಸಿದಾಗ ಅದರಲ್ಲಿಯೂ ಜಗತ್ತಿನಲ್ಲಿಯೇ ಮೊಟ್ಟಮೊದಲ ಬಾರಿಗೆ ಅಮೆರಿಕದಲ್ಲಿ ಈ ಪದದ ಬಳಕೆ ಮತ್ತು ಇವುಗಳ ಅಸ್ತಿತ್ವವನ್ನು ಕಾಣಬಹುದಾಗಿದೆ. ಪ್ರಜೆಗಳ ಹಕ್ಕುಗಳಿಗೆ ಹಾಗೂ ಖಾಸಗಿ ಆಸ್ತಿಗೆ ಮಿತಿಯಿಲ್ಲದಿರುವುದ್ದರಿಂದ ಅಮೆರಿಕಾದಲ್ಲಿ ಒತ್ತಡದ ಗುಂಪುಗಳು ಮೊದಲು ಹುಟ್ಟಿಕೊಂಡಿವೆ ಎಂದು ಹೇಳಬಹುದು. ಯೋಗ್ಯರಾದವರು ಎಷ್ಟು ಬೇಕಾದರೂ ಆಸ್ತಿಯನ್ನು ಗಳಿಸಬಹುದು ಮತ್ತು ನಿರ್ವಹಿಸಬಹುದು ಈ ಕಾರಣಕ್ಕಾಗಿ ಖಾಸಗಿ ಉದ್ದಿಮೆದಾರರು ಅಥವಾ ಆಸ್ತಿವಂತರು ತಮ್ಮ ಹಿತವನ್ನು ಕಾಪಾಡಲು ಮತ್ತು ಸರ್ಕಾರ ಹಾಗೂ ಅಧಿಕಾರಿಗಳ ಮೇಲೆ ಪ್ರಭಾವವನ್ನು ಹೊಂದಲು ಒತ್ತಡ ಗುಂಪುಗಳು ರಚನೆಯಾದವು.

ಇಂದು ಒತ್ತಡ ಗುಂಪುಗಳ ಪ್ರಭಾವವು ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಹೊಂದಿರುವ ಬಹುತೇಕ ರಾಷ್ಟ್ರಗಳಲ್ಲಿ ಕಂಡುಬರುತ್ತದೆ. ಅಮೆರಿಕದ ಗಣರಾಜ್ಯ ಸ್ಥಾಪನೆಯಾದ ದಿನದಿಂದ ಈ ಒತ್ತಡ ಗುಂಪುಗಳು ಅಸ್ಥಿತ್ವದಲ್ಲಿದ್ದರೂ ಇವುಗಳ ಸಂಖ್ಯೆ ಮತ್ತು ಕಾರ್ಯಶೀಲತೆ 20ನೇ ಶತಮಾನದಲ್ಲಿ ಪ್ರವರ್ಧಮಾನಕ್ಕೆ ಬಂದವು.

ಒತ್ತಡ ಗುಂಪುಗಳ ರಚನೆ, ಕಾರ್ಯವಿಧಾನ, ರಾಜಕೀಯ ಕ್ಷೇತ್ರದಲ್ಲಿ ಇವುಗಳ ಪಾತ್ರ ಮುಂತಾದವನ್ನು ಕುರಿತು ಅನೇಕ ವಿದ್ವಾಂಸರು ಅನೇಕ ಕೃತಿಗಳನ್ನು ರಚಿಸಿಕದ್ದಾರೆ. ಅವುಗಳಲ್ಲಲಿ ಪ್ರಮುಖವಾದವುಗಳು 1908ರಲ್ಲಿ ಪ್ರಕಟವಾಧ ಅರ್ಥ ಬಂಟ್ಲಿ ಅವರ *'ದಿ ಪ್ರೊಸೆಸ್ ಆಫ್ ಗೌವರ್ನಮೆಂಟ್'*, 1930ರಲ್ಲಿ ಪ್ರಕಟವಾದ ಡೇವಿಡ್ ಬಿ ಟ್ರೂಮನ್ ರವರ *'ದಿ ಗೌವರ್ನಮೆಂಟಲ್ ಪ್ರೊಸೆಸ್'*, 1943ರಲ್ಲಿ ಪ್ರಕಟವಾದ ವಿ.ಜಿ.ರೇ ರವರ *'ಪಾಲಿಟಿಕ್ಸ್, ಪಾಲಿಟಿಕ್ಸ್ ಅಂಡ್ ಪ್ರೆಸರ್ ಗ್ರೂಪ್'* ಹಾಗೂ ಸ್ವಾನ್ಲೆ ಕೊಚ್ಚಿನ ಕರೋರು ರವರ *'ಬಿಸಿನೆಸ್ ಅಂಡ್ ಪಾಲಿಟಿಕ್ಸ್ ಇನ್ ಇಂಡಿಯಾ'* ಎಂಬ ಗ್ರಂಥಗಳು ಮುಖ್ಯವಾದವುಗಳಾಗಿವೆ.

ಭಾರತದಲ್ಲಿ ಒತ್ತಡ ಗುಂಪುಗಳನ್ನು ಎಲ್ಲಾ ಕ್ಷೇತ್ರಗಳಲ್ಲಿ ಗುರುತಿಸಬಹುದಾಗಿದೆ. ಹೆಚ್ಚಿನದಾಗಿ ಸಾಮಾಜಿಕ ಹಾಗೂ ಆರ್ಥಿಕ ಕ್ಷೇತ್ರಗಳಲ್ಲಿ ಇವುಗಳ ಪ್ರಭಾವವನ್ನು ಕಾಣಬಹುದು ಈ ಗುಂಪುಗಳು ಮೂಲಭೂತವಾಗಿ ಸರ್ಕಾರ ಮತ್ತು ಸಮಾಜದ ವಿವಿಧ ಕ್ಷೇತ್ರಗಳೊಂದಿಗೆ ಉತ್ತಮ ಸಂಬಂಧವನ್ನು ಮುಂದುವರಿಸಿಕೊಂಡು ಹೋಗುವ ಉದ್ದೇಶವನ್ನು ಹೊಂದಿರುತ್ತವೆ. ಸರ್ಕಾರದ ಹಾಗೂ ಹೋಗುಗಳಲ್ಲಿ ಭಾಗಿಯಾಗುವಂತೆ ಎಚ್ಚರಿಕೆ ವಹಿಸುತ್ತವೆ. ವಿದ್ಯೆಯಲ್ಲಿ ಏಕತೆಯನ್ನು ಹೊಂದಿದ್ದು ಅನೇಕ ಭಾಷೆಗಳು, ಪ್ರಾಂತ್ಯಗಳು, ಧರ್ಮಗಳು, ಜಾತಿ–ಪಂಗಡಗಳು, ವರ್ಗಗಳು ಇವೆ ಮೊದಲಾದವುಗಳು ಸೇರಿ ಸಂಘಟಿತರಾಗಿ ತಮ್ಮ ಹಿತಾಸಕ್ತಿ ಪೂರೈಕೆಗಾಗಿ ಸರ್ಕಾರದ ಮೇಲೆ ವಿವಿಧ ರೀತಿಯಲ್ಲಿ ಪ್ರಭಾವ

ಬೀರುತ್ತವೆ ಕೆಲವೊಮ್ಮೆ ಸರ್ಕಾರದ ಭವಿಷ್ಯವನ್ನೇ ನಿರ್ಧರಿಸುವ ಪ್ರಭಾವಿ ಗುಂಪುಗಳಾಗಿವೆ.

**ಒತ್ತಡ ಗುಂಪುಗಳ ರಾಜಕಾರಣ**

ರಾಜಕೀಯ ಬದಲಾವಣೆಗಳಿಗಾಗಿ ಒತ್ತಡ ಹೇರುವ ಪ್ರವೃತ್ತಿ ಸಾರ್ವಕಾಲಿಕ, ಸಾರ್ವತ್ರಿಕ. ಸಂಬಂಧಪಟ್ಟ ವ್ಯಕ್ತಿಗಳ ಅಥವಾ ಅಧಿಕಾರಿಗಳ ಮೇಲೆ ಒತ್ತಡ ಹೇರಿ, ತಮ್ಮ ಗುರಿಯನ್ನು ಅಥವಾ ಅಭಿಲಾಷೆಯನ್ನು ಈಡೇರಿಸಿಕೊಳ್ಳುವುದು ಅಥವಾ ತಮ್ಮ ಹಿತ ರಕ್ಷಿಸಿಕೊಳ್ಳುವುದು ಒತ್ತಡ ಗುಂಪುಗಳ ವಿಧಾನ. ಭಾರತದ ರಾಜಕೀಯ ವ್ಯವಸ್ಥೆಯಲ್ಲಿ ಒತ್ತಡ ಗುಂಪುಗಳು ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗ ಮತ್ತು ಸಾರ್ವಜನಿಕ ಅಭಿಪ್ರಾಯ ಮುಂತಾದ ಕ್ಷೇತ್ರಗಳ ಮೇಲೆ ಅಪಾರ ಪ್ರಭಾವ ಬೀರುತ್ತವೆ.

**ಶಾಸಕಾಂಗದ ಮೇಲೆ ಪ್ರಭಾವ**

ಒತ್ತಡ ಗುಂಪುಗಳು ತಮ್ಮ ಹಿತಾಸಕ್ತಿಗೆ ಪೂರಕವಾದ ನೀತಿಗಳನ್ನು ಶಾಸನಗಳನ್ನು ಹಾಗೂ ನಿರ್ಧಾರಗಳನ್ನು ಅನುಷ್ಠಾನಗೊಳಿಸುವಂತೆ ತಮ್ಮ ಕ್ಷೇತ್ರದಿಂದ ಶಾಸನಸಭೆಗಳಿಗೆ ಆಯ್ಕೆಯಾದ ಸದಸ್ಯರ ಮೇಲೆ ಒತ್ತಡ ಬರುತ್ತವೆ. ಉದಾಹರಣೆ ಆರ್‌ಎಸ್‌ಎಸ್ ಹಾಗೂ ಅಖಿಲ ಭಾರತ ವಿದ್ಯಾರ್ಥಿ ಪರಿಷತ್ತುಗಳು ಬಿಜೆಪಿ ಶಾಸಕರ ಮೇಲೆ ಒತ್ತಡ ತರಬಲ್ಲವು. ಹಾಗೆಯೇ ಸಿಐಟಿಯು ಮತ್ತು ಐಎನ್‌ಟಿಯುಸಿ ಟ್ರೇಡ್ ಯೂನಿಯನ್‌ಗಳು ಕಮ್ಯುನಿಸ್ಟ್ ಶಾಸಕರ ಮೇಲೆ ಒತ್ತಡ ತರಬಲ್ಲವು. ಅದೇ ರೀತಿಯಾಗಿ ಒತ್ತಡ ಗುಂಪುಗಳು ಸಾರ್ವಜನಿಕ ಲೆಕ್ಕ ಸಮಿತಿ ಅಂದಾಜು ಸಮಿತಿ ಭರವಸೆಗಳ ಮೇಲಿನ ಸಮಿತಿ ಉಂಟಾದ ಶಾಸನೀಯ ಸಮಿತಿಗಳ ಸದಸ್ಯರಿಗೆ ಒತ್ತಡ ತಂದು ತಮ್ಮ ಹಿತಾಸಕ್ತಿಯನ್ನು ರಕ್ಷಿಸಿಕೊಳ್ಳುತ್ತವೆ.

**ಕಾರ್ಯಾಂಗದ ಮೇಲೆ ಪ್ರಭಾವ**

ಭಾರತದಂತಹ ಸಂಸದೀಯ ಸರ್ಕಾರದಲ್ಲಿ ಒತ್ತಡ ಗುಂಪುಗಳು ಶಾಸಕಾಂಗದ ಮೂಲಕ ಕಾರ್ಯಾಂಗದ ಮೇಲೆ ಪ್ರಭಾವ ಬೀರುತ್ತವೆ. ಗೊತ್ತುವಳಿ ಸೂಚನೆ ಅವಿಶ್ವಾಸ ನಿರ್ಣಯ ಮುಂತಾದವುಗಳ ಮೂಲಕ ಸಚಿವ ಸಂಪುಟದ ಮೇಲೆ ಪ್ರಭಾವ ಬೀರುವಂತೆ ತಮ್ಮ ಶಾಸನ ಸಭೆಗೆ ಆಯ್ಕೆಯಾದ ಸದಸ್ಯರ ಮೇಲೆ ಒತ್ತಡ ತರುತ್ತವೆ ಮಂತ್ರಿಗಳ ಮೇಲೆ ಒತ್ತಡ ತರುವ ಮೂಲಕ ತಮ್ಮ ಹಿತಾಸಕ್ತಿಗೆ ಪೂರಕವಾದ ನಿರ್ಧಾರಗಳನ್ನು ತೆಗೆದುಕೊಳ್ಳುವಂತೆ ಹಾಗೂ ನೀತಿಗಳನ್ನು ರೂಪಿಸುವಂತೆ ಮಂತ್ರಿಮಂಡಲದ ಮೇಲೆ ಪ್ರಭಾವ ಬೀರುತ್ತವೆ. ನಿರೂಪಣೆ ಹಾಗೂ ನಿರ್ಧಾರ ತೆಗೆದುಕೊಳ್ಳುವುದಕ್ಕೆ ಅವಶ್ಯಕವಾದ ಮಾಹಿತಿ ಹಾಗೂ ಅಂಕಿ ಅಂಶಗಳನ್ನು ಒದಗಿಸುವ ಮೂಲಕ ಕಾರ್ಯಾಂಗದ ಮೇಲೆ ಪ್ರಭಾವ ಬೀರುತ್ತವೆ.

**ನ್ಯಾಯಾಂಗದ ಮೇಲೆ ಪ್ರಭಾವ**

ಒತ್ತಡ ಗುಂಪುಗಳು ಶಾಸಕಾಂಗ ಕಾರ್ಯಾಂಗಗಳ ಮೇಲೆ ಪ್ರತ್ಯೇಕವಾಗಿ ಪ್ರಭಾವ ಬೀರಿದರೆ ನ್ಯಾಯಾಂಗದ ಮೇಲೆ ಪರೋಕ್ಷವಾಗಿ ಪ್ರಭಾವ ಬೀರಬಹುದು. ತಾವು ಪ್ರತಿಪಾದಿಸುವ ವಿಷಯಕ್ಕೆ ಧಕ್ಕೆ ಉಂಟಾದ ಒತ್ತಡ ಗುಂಪುಗಳ ನ್ಯಾಯಾಲಯದಲ್ಲಿ ದಾವೇ ಹೂಡಬಹುದು. ಈ ಗುಂಪುಗಳು ಒಂದು ವಿಷಯದ ವಿರುದ್ಧವಾಗಿ ಸಾರ್ವಜನಿಕ ಅಭಿಪ್ರಾಯವನ್ನು ರೂಪಿಸುವುದರ ಮೂಲಕವೂ ನ್ಯಾಯಾಂಗವನ್ನು ಪ್ರವೇಶಿಸುತ್ತವೆ. ಲೇಖನಗಳು, ವಿಮರ್ಶೆಗಳು, ವಿಶ್ಲೇಷಣಗಳ ಮೂಲಕ ಒತ್ತಡ ಗುಂಪುಗಳು ನ್ಯಾಯಾಧೀಶರ ತೀರ್ಪಿನ ಮೇಲೆ ಪ್ರಭಾವ ಬೀರುವ ಸಾಧ್ಯತೆಯಾಗಿರುತ್ತದೆ.

**ಆಡಳಿತ ಶಾಹಿಯ ಮೇಲೆ ಪ್ರಭಾವ**

ರಾಜ್ಯಾಡಳಿತದಲ್ಲಿ ಪ್ರಮುಖ ಪಾತ್ರವಹಿಸುವ ಒತ್ತಡ ಗುಂಪುಗಳು ಆಡಳಿತ ವ್ಯವಸ್ಥೆಯ ಮೇಲೂ ಕೂಡ ಪ್ರಭಾವ ಬೀರುತ್ತವೆ. ಅಧಿಕಾರಗಳ ಪರವಾಗಿ ವ್ಯಾಪಕ ಪ್ರಚಾರ ಮಾಡುವುದು ಸಚಿವರ ಮೇಲೆ ಒತ್ತಡ ತಂದು ತಮಗೆ ಅನುಕೂಲವಾಗಿರುವ ಅಧಿಕಾರಿಗಳನ್ನು ತಮ್ಮ ಪ್ರದೇಶಗಳಿಗೆ ಹಾಕಿಸಿಕೊಳ್ಳುವುದು ಮುಂತಾದ ಸಕಾರಾತ್ಮಕ ವಿಧಾನಗಳ ಮೂಲಕ ಅಧಿಕಾರಿಗಳನ್ನು ಪ್ರಭಾವಿಸುತ್ತವೆ. ತಮ್ಮ ಪರವಾಗಿ ಕಾರ್ಯನಿರ್ವಹಿಸದ ಅಧಿಕಾರಿಗಳ ವರ್ಗಾವಣೆಗೂ ಕೂಡ ಒತ್ತಡ ತಂದು ತಮ್ಮ ಕಾರ್ಯ ಸಾಧಿಸಿಕೊಳ್ಳುತ್ತವೆ.

**ಸಾರ್ವಜನಿಕ ಅಭಿಪ್ರಾಯದ ಮೇಲೆ ಪ್ರಭಾವ.**

ವರದಿಗಳು ಪುಸ್ತಕಗಳು ಲೇಖನಗಳನ್ನು ಪ್ರಕಟಿಸುವುದರ ಮೂಲಕ ಒತ್ತಡ ಗುಂಪುಗಳು ಸಾರ್ವಜನಿಕ ಅಭಿಪ್ರಾಯದ ಮೇಲೆ ಪ್ರಭಾವ ಬೀರುತ್ತವೆ. ಗುಂಪುಗಳು ನಿರಂತರ ಹಾಗೂ ವ್ಯಾಪಕ ಪ್ರಚಾರದ ಮೂಲಕ ತಮಗೆ ಅನುಕೂಲವಾಗುವ ರೀತಿ ಸಾರ್ವಜನಿಕ ಅಭಿಪ್ರಾಯ ಮೂಡಿಸಬಲ್ಲವು. ಈ ಉದ್ದೇಶಕ್ಕಾಗಿ ವಾಟ್ಸ್ಯಾಪ್, ಫೇಸ್‌ಬುಕ್, ಟ್ವೀಟರ್, ಇನ್‌ಸ್ಟಾಗ್ರಾಮ್ ಮುಂತಾದ ಸಾಮಾಜಿಕ ಮಾಧ್ಯಮಗಳ ಜೊತೆಗೆ ಮುದ್ರಣ, ದೃಶ್ಯ ಮಾಧ್ಯಮಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳುತ್ತವೆ. ಸ್ಥಳೀಯ ಪತ್ರಿಕೆಗಳಲ್ಲಿ ಪ್ರಕಟವಾಗುವ ವಿಷಯವನ್ನು ಪ್ರಾಯೋಗಿಕ ಸಾಕ್ಷ್ಯಗಳನ್ನಾಗಿ ಬಳಸಿಕೊಳ್ಳುತ್ತವೆ.

**ಚುನಾವಣೆಗಳ ಮೇಲೆ ಪ್ರಭಾವ**

ಒತ್ತಡ ಗುಂಪುಗಳು ತಮ್ಮ ಹಿತಾಸಕ್ತಿಯನ್ನು ಕಾಪಾಡಬಲ್ಲ ವ್ಯಕ್ತಿಗಳು ಅಧಿಕಾರಕ್ಕೆ ಬರಲು ಅವಕಾಶ ಮಾಡಿಕೊಡಲು ಚುನಾವಣೆಗಳನ್ನು ಉಪಯೋಗಿಸಿಕೊಳ್ಳುತ್ತವೆ. ಟಿಕೆಟ್ ಹಂಚಿಕೆ, ಪ್ರಚಾರ, ಮತದಾನ ಮುಂತಾದ ಎಲ್ಲಾ ಸಂದರ್ಭಗಳಲ್ಲಿಯೂ ಕೂಡ ತಮ್ಮ ಅಭ್ಯರ್ಥಿಯನ್ನು ಗೆಲ್ಲಿಸುವಲ್ಲಿ ಪ್ರಯತ್ನಿಸುತ್ತವೆ. ಈ ಸಂದರ್ಭದಲ್ಲಿ ಪ್ರಚಾರಕ್ಕೆ ಅಗತ್ಯವಾದ ಮಾನವ ಸಂಪನ್ಮೂಲ, ಪ್ರಚಾರ ಸಾಮಗ್ರಿ ಹಾಗೂ ಹಣಕಾಸಿನ ಸಂಪನ್ಮೂಲಗಳನ್ನು ಪೂರೈಸುತ್ತವೆ. ಇಂಥ ಪ್ರಯತ್ನಗಳ ಮೂಲಕ ಒತ್ತಡ ಗುಂಪುಗಳು ತಮ್ಮ ಪರವಾಗಿ ಕೆಲಸ ಮಾಡಬಲ್ಲ ಅಭ್ಯರ್ಥಿಗಳನ್ನು ಶಾಸನಸಭೆಗಳಿಗೆ ಆಯ್ಕೆಯಾಗುವಂತೆ ನೋಡಿಕೊಳ್ಳುತ್ತವೆ.

**ಚಳುವಳಿಯನ್ನು ನಡೆಸುವುದು**

ಕೆಲವು ಒತ್ತಡ ಗುಂಪುಗಳು ತಮ್ಮ ಹಿತಾಸಕ್ತಿ ರಕ್ಷಣೆಗಾಗಿ ಚಳುವಳಿಯನ್ನು ನಡೆಸುತ್ತವೆ. ಪ್ರತಿಭಟನೆ ಉಪವಾಸ ಸತ್ಯಾಗ್ರಹ ಮುಂತಾದ ತಂತ್ರಗಳನ್ನು ಬಳಸಿಕೊಳ್ಳುತ್ತವೆ. ನರ್ಮದ ಬಚಾವ್ ಆಂದೋಲನ, ಅಪ್ಪಿಕೋ ಚಳವಳಿ, ದಲಿತ ಚಳುವಳಿ, ಮಹಿಳಾ ವಿವೇಚನಾ ಚಳವಳಿ, ವಿದ್ಯಾರ್ಥಿ ಚಳುವಳಿ, ರೈತ ಚಳುವಳಿ ಇತ್ಯಾದಿ ಚಳುವಳಿಗಳಲ್ಲಿ ಕೆಲವು ತಂತ್ರಗಳನ್ನು ಉಪಯೋಗಿಸಿಕೊಂಡು ಯಶಸ್ವಿಯಾಗಿರುವುದನ್ನು ಕಾಣಬಹುದು.

ಒತ್ತಡ ಗುಂಪುಗಳು ಆಧುನಿಕ ರಾಜಕೀಯ ಪದ್ಧತಿಯಲ್ಲಿ ಅತ್ಯಂತ ಪ್ರಮುಖ ಪಾತ್ರವನ್ನು ನಿರ್ವಹಿಸುತ್ತವೆ. ಪ್ರಜಾಸತ್ತಾತ್ಮಕ ವ್ಯವಸ್ಥೆಯನ್ನು ಹೊಂದಿರುವ ಪ್ರತಿಯೊಂದು ರಾಷ್ಟ್ರಗಳಲ್ಲಿಯೂ ಇವುಗಳ ಅಸ್ತಿತ್ವವನ್ನು ಕಾಣಬಹುದಾಗಿದೆ. ಭಾರತದ ಪ್ರಜಾಪ್ರಭುತ್ವ ಯಶಸ್ವಿಯಾಗಲು ಮತ್ತು ಕಲ್ಯಾಣ ರಾಜ್ಯದ ಪರಿಕಲ್ಪನೆಯನ್ನು ಜಾರಿಗೆ ತರಲು ಒತ್ತಡ ಗುಂಪುಗಳು ಅಗತ್ಯವಾಗಿವೆ ಇವು ಸಾರ್ವಜನಿಕ ಅಭಿಪ್ರಾಯವನ್ನು ಮೂಡಿಸಿ ಸರ್ಕಾರವು ಜನತೆಯ ಬೇಡಿಕೆಗಳಿಗೆ ಸ್ಪಂದಿಸುವಂತೆ ಮಾಡುತ್ತವೆ. ಒತ್ತಡ ಗುಂಪುಗಳು ಇಂದು ಪ್ರಜಾಪ್ರಭುತ್ವಕ್ಕೆ ಅತ್ಯವಶ್ಯಕವೆಂದು ಪರಿಗಣಿಸಲ್ಪಟ್ಟಿವೆ ಅಲ್ಲದೆ ವ್ಯಕ್ತಿಗಳ ಹಿತಾಸಕ್ತಿಗಳ ರಕ್ಷಕನೆಂದು ಭಾವಿಸಲಾಗಿದೆ.

**ಪರಾಮರ್ಶನ ಗ್ರಂಥಗಳು**


- ಬಾಬುಲಾಲ್ ಪಾಡಿಯ. (1980). *ಪ್ರೆಷರ್ ಗ್ರೂಪ್ ಇನ್ ಇಂಡಿಯನ್ ಪಾಲಿಟಿಕ್ಸ್.* ರೇಡಿಯಂಟ್ ಪಬ್ಲಿಷರ್.
- ದೇವರಾಜ್ ಡಿಎಲ್. (2011). *ಭಾರತ ಸಂವಿಧಾನ.* ಯಶಸ್ಸು ಪ್ರಕಾಶನ.
- ದೇವೇಗೌಡ. (2005). *ಭಾರತ ಸಂವಿಧಾನ ಮತ್ತು ಪ್ರಕ್ರಿಯೆ. ಚೇತನ* ಬುಕ್ ಹೌಸ್.
- ಮುಜಾವರ್ ಡಿ. ಕೆ. (2009). *ಭಾರತದಲ್ಲಿನ ರಾಜಕೀಯ ಪ್ರಕ್ರಿಯೆಗಳು.* ಭಾವಿಕಟ್ಟೆ ಪ್ರಕಾಶನ.
- ಶಂಕರಪ್ಪ ಆರ್. (2011). *ಸಂವಿಧಾನ ರಾಜಕೀಯ ಮತ್ತು ಸರಕಾರ.* ಅನುಜಯ ಪ್ರಕಾಶನ.